# ಕರುಳ ಹಿಂಡುವ ಚಿತ್ರಗಳು

ಆನಂದದ ಅಥವಾ ವೇದನೆಯ ಚರಮಸ್ಥಿತಿಯನ್ನು ಹೃದಯಕ್ಕೆ ತಟ್ಟುವಂತೆ ನೇರ ಮಾತುಗಳಲ್ಲಿ ಹೇಳುವುದು ಕಷ್ಟ. ಮಾತು ಕಲೆ ಆದಾಗ ಅಭಿವ್ಯಕ್ತಿಗೆ ಹೊಳಪು ಸಿಗುತ್ತದೆ. ಒಂದು ಚಿತ್ರ ಸಾವಿರ ಪದಗಳಿಗೆ ಸಮ ಎಂದು ಹೇಳುತ್ತಾರೆ. ಚಿತ್ರಕಲೆ ಒಂದು ಸಶಕ್ತ ಅಭಿವ್ಯಕ್ತಿ ಮಾಧ್ಯಮ. ಗಂಭೀರ ಸುದ್ದಿಗಳನ್ನು ಪರಿಣಾಮಕಾರಿಯಾಗಿ ಮುಟ್ಟಿಸಲು ಪತ್ರಿಕಾವರದಿಗಾರರೂ ಸಹ ಚಿತ್ರಗಳ ಆಶ್ರಯ ಪಡೆಯುತ್ತಾರೆ. ಕರುಳನ್ನು ಕಲಕುವ ಶಕ್ತಿ ಕಲೆಗೆ ಮಾತ್ರ ಇದೆ. ಇತ್ತೀಚೆಗೆ ಪತ್ರಿಕೆಗಳ ಮುಖಪುಟದಲ್ಲಿ ಒಂದು ಸುದ್ದಿಸಹಿತ ಚಿತ್ರ ಹರಿದಾಡಿತು. ಅದು ಅಯ್ಲನ್ ಕುರ್ದಿ ಎಂಬ ಮೂರು ವರ್ಷದ ಮಗುವಿನ ಶವದ ಚಿತ್ರ. ಕೇವಲ ಮಗುವಿನ ಶವವಾಗಿದ್ದರೆ ಅದು ಸುದ್ದಿಯಾಗುತ್ತಿರಲಿಲ್ಲ. ನಿರ್ದಯಿ ಸಮುದ್ರ ಕೊಚ್ಚಿಕೊಂಡು ಹೋಗಿ ದಂಡೆಯ ಮೇಲೆ ಎಸೆದಾಗ ಬೋರಲಾಗಿ ಬಿದ್ದಿದ್ದ ಹಸುಳೆಯ ಶವದ ಚಿತ್ರ ಅದು.

ಐಎಸ್‌ಐಎಸ್ ಬಂಡುಕೋರರ ದಾಳಿಗೆ ಸಿಲುಕಿ ಮನೆಮಾರು ಕಳೆದುಕೊಂಡು ಸಿರಿಯಾ ದೇಶದಿಂದ ಗುಳೇ ಹೋಗುತ್ತಿರುವ ಸಾವಿರಾರು ನಿರಾಶ್ರಿತರು ಕಾನೂನುಬಾಹಿರವಾಗಿ ಯೂರೋಪಿನ ದೇಶಗಳತ್ತ ಕಳ್ಳಹಾದಿ ಹಿಡಿಯುತ್ತಿದ್ದಾರೆ. ಅಂಥವರಲ್ಲಿ ಅಯ್ಲನ್ ಕುರ್ದಿಯ ತಂದೆಯೂ ಒಬ್ಬ. ಅವನು ಹಿಡಿದದ್ದು ರಾತ್ರಿವೇಳೆ ಇಂಥವರನ್ನು ಸಾಗಿಸುತ್ತಿದ್ದ ಒಂದು ದೋಣಿ. ದಾಟಬೇಕಾದದ್ದು ಮೆಡಿಟರೇನಿಯನ್ ಸಮುದ್ರ! ಚಂದ್ರನನ್ನು ಅರಸಿ ಗಾಳಿಪಟದ ಬಾಲಂಗೋಚಿ ಹಿಡಿದು ಹೊರಟಂತಾಗಿತ್ತು ಅವನ ಸ್ಥಿತಿ. ಮಾರ್ಗಮಧ್ಯೆ ದೋಣಿ ಮುಗುಚಿತು. ಹೆತ್ತವರ ಮಡಿಲಿನಿಂದ ಜಾರಿದ ಈ ಹಸುಗೂಸು ಕೊಚ್ಚಿಕೊಂಡು ಹೋಗಿ ಬಿದ್ದದ್ದು ಟರ್ಕಿಯ ಕಡಲ ದಂಡೆಯ ಮೇಲೆ. ಎಂತಹ ಕಟುಕರ ಕರುಳನ್ನೂ ಹಿಂಡುವ ಆ ಚಿತ್ರ ಕೇವಲ ಕುರ್ದಿಯ ಸಾವಿನ ಚಿತ್ರವಲ್ಲ ಅಥವಾ ಅವನ ತಂದೆತಾಯಿಯರ ಬಡತನದ ಕಥನವಲ್ಲ. ಅದು ಇಡೀ ಸಿರಿಯಾ ದೇಶದ ಚಿತ್ರವನ್ನು ಕಣ್ಣಿಗೆ ಕಟ್ಟುತ್ತದೆ. ಅಲ್ಲಿನ ಸರ್ಕಾರ, ಸಂಸ್ಕೃತಿ, ಧರ್ಮ, ಇತಿಹಾಸ, ಆರ್ಥಿಕತೆ ಎಲ್ಲವೂ ಆ ಚಿತ್ರದಲ್ಲಿ ಅಡಕವಾಗಿವೆ. ಅದೊಂದು ಸಾಂಕೇತಿಕ ದುರಂತ ದೃಶ್ಯಕಾವ್ಯ.

ಅಂಥದೇ ಇನ್ನೊಂದು ಚಿತ್ರ 2002ರ ವರ್ಷಪೂರಾ ಜಗತ್ತಿನಾದ್ಯಂತ ಪತ್ರಿಕೆಗಳಲ್ಲಿ, ಇತರ ಮಾಧ್ಯಮಗಳಲ್ಲಿ ಹರಿದಾಡಿತು. ಅದು ಖುತ್ಬುದ್ದೀನ್ ಅನ್ಸಾರಿ ಎಂಬ ಸಂತ್ರಸ್ತ ಯುವಕನ ಮುಖದ ಚಿತ್ರ. ಭಾರತದ ಇತಿಹಾಸದಲ್ಲಿ ಕಪ್ಪುಚುಕ್ಕೆಯಾಗಿ ಉಳಿದುಕೊಂಡಿರುವ ಗುಜರಾತಿನ ಕೋಮುಗಲಭೆಯ ನರಮೇಧವನ್ನು ಸಾದರಪಡಿಸುವ ಏಕಮೇವಾದ್ವಿತೀಯ ಚಿತ್ರ ಅದು. ತನ್ನನ್ನು, ಕುಟುಂಬವನ್ನು ರಕ್ಷಿಸೀ... ಎಂದು ಗೋಗರೆಯುತ್ತಾ ಆಕ್ರಂದಿಸುತ್ತಿರುವ ದುಃಖ ಮಡುಗಟ್ಟಿದ ಮುಖ. ಕಣ್ಣೀರು ತುಳುಕಿದರೂ ಬೀಳದೆ ಅಲ್ಲೆ ಹೆಪ್ಪುಗಟ್ಟಿದೆ. ಮಾತು ಹೊರಡದೆ ಬಾಯಿ ಎಲ್ಲವನ್ನೂ ಹೇಳುತ್ತಿದೆ. ಸಿಡಿಲು ತನ್ನ ಕಣ್ಣ ಮುಂದೆಯೆ ನಿಂತು ಇನ್ನೇನು ಬಡಿಯಬೇಕು ಎನ್ನುವಾಗ ಮೂಡುವ ಮುಖಚರ್ಯೆ ಅದು. ಆ ಕ್ಷಣದ ಆರ್ದ್ರತೆ, ಸಂಕಟ, ತಲ್ಲಣಗಳನ್ನು ಗಟ್ಟಿ ಹಿಡಿದಿಟ್ಟ ರೂಪಕದಂತೆ ಇತ್ತು ಆ ಮುಖ. ಅದು ಕೋಮುವಾದದ ಭೀಕರ ಪರಿಣಾಮವನ್ನು ಲೋಕಕ್ಕೆ ಬಿತ್ತರಿಸುವಲ್ಲಿ ಯಶಸ್ವಿಯಾಯಿತು.

ಆ ಮುಖ ಕೇವಲ ಅನ್ಸಾರಿಯ ದುಃಖವನ್ನು ಸಾರುತ್ತಿರಲಿಲ್ಲ. ದೇಶದ ಅಲ್ಪಸಂಖ್ಯಾತರ ಅಸಹಾಯಕತೆಯನ್ನು, ಗುಜರಾತಿನ ಗೊಂದಲವನ್ನು, ಭಾರತ ಎದುರಿಸುತ್ತಿರುವ ಕೋಮುವಾದದ ಭೀಕರತೆಯನ್ನು ಬಿತ್ತರಿಸುತ್ತಿತ್ತು. ಇಂಥವು ಪ್ರಕೃತಿಯ ಸಹಜ ಓಘದಲ್ಲಿ ದೊರಕುವ ಚಿತ್ರಗಳು. ಅವು ಕಲ್ಪಿಸಿ ಚಿತ್ರಕತೆಯನ್ನು ಹೆಣೆದು ಪಡೆಯತಕ್ಕವಲ್ಲ.

ಈ ಸಂದರ್ಭದಲ್ಲಿ ಕೆವಿನ್ ಕಾರ್ಟರ್ ಎಂಬ ದಕ್ಷಿಣ ಆಫ್ರಿಕಾದ ಬಿಳಿಯ ಛಾಯಾಚಿತ್ರ ವರದಿಗಾರನನ್ನು ನೆನೆಯಲೇಬೇಕು. 1993 ರಲ್ಲಿ ಸೂಡಾನ್ ತೀವ್ರ ಬರಗಾಲವನ್ನು ಎದುರಿಸಿತು. ಆಹಾರ, ನೀರಿಗಾಗಿ ಜನರು ಪರದಾಡುತ್ತಿದ್ದರು. ಗೆರಿಲ್ಲಾ ಹೋರಾಟಗಾರರ ಕಾಟ ಬೇರೆ. ವಿಶ್ವಸಂಸ್ಥೆ ಎಂದಿನಂತೆ ಗಂಜಿಕೇಂದ್ರಗಳನ್ನು ಸ್ಥಾಪಿಸಿತ್ತು. ವಯಸ್ಕರು ಅಲ್ಲಿ ಆಹಾರವನ್ನು ಪಡೆಯಲು ಹೋರಾಟವನ್ನೆ ನಡೆಸಬೇಕಾಗಿತ್ತು. ಮಕ್ಕಳು, ವೃದ್ಧರು ಬಿದಿರ ಗುಡಿಸಲುಗಳಲ್ಲಿ ಉಳಿಯುತ್ತಿದ್ದರು. ಅಂಥ ಒಂದು ಹಳ್ಳಿಯಲ್ಲಿ ಕಾರ್ಟರ್ ಬರಪೀಡಿತ ಜನರ ದುಸ್ಥಿತಿಯನ್ನು ವಿವರಿಸುವ ಒಂದು ಚಿತ್ರವನ್ನು ಸೆರೆಹಿಡಿಯಲು ಪಕ್ಕಾದ ಸನ್ನಿವೇಶಕ್ಕಾಗಿ ಕಾಯುತ್ತಿದ್ದ. ತಕ್ಷಣ ಒಂದು ದೃಶ್ಯ ಗೋಚರಿಸಿತು. ಮೂಳೆಚಕ್ಕಳವಾಗಿ ಸೊರಗಿದ್ದ ಸುಮಾರು ಮೂರು ವರ್ಷದ ಹೆಣ್ಣುಮಗುವೊಂದು ಕೊಳಕು ಹಾದಿಯಲ್ಲಿ ತೆವಳುತ್ತಾ ಸಾಗಿತ್ತು. ನೆಲಕ್ಕೆ ಅಪ್ಪರಿಸಿದ ಪುಟ್ಟ ಕಪ್ಪು ದೇಹ, ಇಳಿಬಿದ್ದ ಮುಖಕ್ಕೆ ಮುತ್ತಿದ ನೊಣಗಳು, ಕಡ್ಡಿಯಂಥ ತೋಳುಗಳ ಊರುಗೋಲು. ಮಾರುದೂರ ಹಿಂದುಗಡೆ ಆಗತಾನೆ ತಿಪ್ಪೆಗುಂಡಿಯಿಂದ ಎದ್ದುಬಂದ, ಇನ್ನೇನು ಮಗುವಿನ ಮೇಲೆ ಎರಗಲಿದ್ದ ರಣಹದ್ದು! 'ಬರ'ವನ್ನು ತೋರುವುದಕ್ಕೆ ಇದಕ್ಕಿಂತ ಉತ್ತಮ ಚಿತ್ರ ಸಿಗಲಾರದು ಎಂದುಕೊಂಡ ಕೆವಿನ್ ಆ ಕ್ಷಣ ಸಂತಸಗೊಂಡಿರಲೇಬೇಕು.

ಆ ಚಿತ್ರ 26.3.1993 ರಂದು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯಲ್ಲಿ ಪ್ರಕಟವಾಯಿತು. ಮತ್ತೆ ಮತ್ತೆ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಆ ಚಿತ್ರ ಜಗತ್ತಿನಾದ್ಯಂತ ಸಂಚಲನ ಉಂಟುಮಾಡಿತು. ಕೆವಿನ್ ಗೆ ಹಣ, ಕೀರ್ತಿ ಎರಡೂ ಲಭಿಸಿತು. ಏಪ್ರಿಲ್ 1994ರಲ್ಲಿ ಆ ಚಿತ್ರಕ್ಕೆ ಪುಲಿಟ್ಜರ್ ಬಹುಮಾನವೂ ಬಂತು. ಎಲ್ಲೆಡೆಯಿಂದ ಸಾವಿರಾರು ಜನರು ಆ ಮಗುವಿನ ಗತಿಯೇನಾಯಿತು ಎಂದು ಕೇಳತೊಡಗಿದರು. ಅಪ್ಪಅಮ್ಮನನ್ನು ಹುಡುಕುತ್ತಾ ಗಂಜಿಕೇಂದ್ರದತ್ತ ಹೊರಟಿತು ಎಂಬುದು ಊಹೆ. ಆಗ ಒಂದು ಪತ್ರಿಕೆ ಕೆವಿನ್ ಕಾರ್ಟರ್ ಕುರಿತು ಹೀಗೆ ಬರೆಯಿತು. 'ಆ ಮಗುವಿನ ಅಸಹಾಯಕ ಸ್ಥಿತಿಯನ್ನು ಕಂಡೂ ತನ್ನ ಕೆಮೆರಾದ ಲೆನ್ಸ್ ಅನ್ನು ಚೌಕಟ್ಟಿಗೆ ಹೊಂದಿಸಿಕೊಳ್ಳುತ್ತಿದ್ದ ಛಾಯಾಗ್ರಾಹಕನೂ ಒಬ್ಬ ಕೊಲೆಗಡುಕ, ಆ ದೃಶ್ಯದೊಳಗಿನ ಮತ್ತೊಂದು ರಣಹದ್ದು' ಇಂಥ ಪ್ರತಿಕ್ರಿಯೆಗಳಿಂದ ಅಪಾರ ದುಃಖಿತನಾಗಿದ್ದ ಕೆವಿನ್ 'ನೋವು ನನ್ನ ಸಂತೋಷವನ್ನು ನುಂಗಿಹಾಕಿದೆ, ನಾನು ಖಿನ್ನನಾಗಿದ್ದೇನೆ' ಎಂದು ಬರೆದಿಟ್ಟು 1994 ರ ಜುಲೈ 27 ರಂದು ಆತ್ಮಹತ್ಯೆ ಮಾಡಿಕೊಂಡ.

ಈ ಮೂರೂ ಚಿತ್ರಗಳು ಧ್ವನಿಸುತ್ತಿರುವುದು ಮಾನವೀಯತೆಯ ಕೊರತೆಯನ್ನು. ಕೆವಿನ್ ಕೇವಲ ಸಂಕೇತ ಮಾತ್ರ. ಆ ಕ್ಷಣದ ಚಿತ್ರಕ್ಕಿಂತಲೂ ಆ ಸ್ಥಿತಿಗೆ ತಲುಪಿಸಲು ಕಾರಣವಾದ ಚಿತ್ರಾವಳಿಯಲ್ಲಿ ನಮ್ಮೆಲ್ಲರ ಮುಖಗಳೂ ಕಾಣಬಹುದಲ್ಲವೆ?

■ ಮೂಚಿ

## ಮಾತೇ ಮುತ್ತು

★ ದೀಪದ ಬೆಳಕಿನಲ್ಲಿ ಒಬ್ಬ ಭಾಗವತ ಓದಬಹುದು, ಇನ್ನೊಬ್ಬ ಕಳ್ಳತನ ಮಾಡಬಹುದು. ಇದರಿಂದ ದೀಪಕ್ಕೆ ಏನೂ ಕಳಂಕವಿಲ್ಲ.

-ರಾಮಕೃಷ್ಣ ಪರಮಹಂಸ

★ ಪ್ರೀತಿಯೇ ನನ್ನ ದೇವರು. ಅದು ಎಲ್ಲರಲ್ಲೂ ಮಧುರ ಯಾತನೆಯನ್ನು ಉಂಟು ಮಾಡುತ್ತದೆ.

-ಶ್ರೀ ಅರಬಿಂದೊ

★ ನಿಮ್ಮ ಬದುಕಿನಲ್ಲಿ ಘಟಿಸುವ ಒಂದು ಸಣ್ಣ ತಪ್ಪು ನಿಮ್ಮಲ್ಲಿ ಪರಿವರ್ತನೆಗೆ ದಾರಿ ತೋರುತ್ತದೆ.

-ಹೆನ್ರಿ ಫೋರ್ಡ್

★ ತಾಳ್ಮೆಯಿಂದಿರಿ. ತಾಳ್ಮೆಯೇ ವಿಶ್ವಾಸದ ಆಧಾರಸ್ತಂಭ.

-ಉಮರ್ ಬಿನ್ ಖತ್ತಾಬ್

★ ಭವಿಷ್ಯವನ್ನು ನಾವೇ ರೂಪಿಸಿಕೊಂಡರೂ, ಅದು ವಿಧಿ ಎಂದುಕೊಳ್ಳುವುದು ಮೂಢತನ.

-ಬೆಂಜಮಿನ್ ಡಿಸ್ರೇಲಿ

★ ಉಪದೇಶ ಮಾಡುವವನ ದೋಷ ತಕ್ಷಣ ನಮ್ಮನ್ನು ಆಕರ್ಷಿಸುತ್ತದೆ.

-ಮಾರ್ಟಿನ್ ಲೂಥರ್ ಕಿಂಗ್

★ ದಾನ ಮಾಡಿರಿ, ಆದರೆ ಅದರಿಂದ ಪ್ರತಿಫಲ ನಿರೀಕ್ಷಿಸಬೇಡಿ. ಅದು ತಾನಾಗಿಯೇ ವಾಪಸ್ ಬರಲಿದೆ.

-ಸ್ವಾಮಿ ವಿವೇಕಾನಂದ

★ ಮಾತು ಮನಸ್ಸುಗಳನ್ನು ಒಂದುಗೂಡಿಸಬೇಕೆ ಹೊರತು ಒಡೆಯಬಾರದು.

-ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ಅನುಮಾನ ಪಡದೆ ಇರಲು ಮಕ್ಕಳಿಗೆ ಕಲಿಸುವುದು ನಿಜವಾದ ದುರಂತ.

-ಕ್ಲಾರೆನ್ಸ್ ಡ್ಯಾರೊ